# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 517 (499) |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ: | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಉತ್ತರ ನಗರ ಪಾಲಿಕೆಯ ಕಂದಾಯ ಅಧಿಕಾರಿ ಬ್ಯಾಟರಾಯನಪುರದ ಕಚೇರಿಯಲ್ಲಿ ಸರ್ವೇ ನಂ 110/3, ಜಕ್ಕೂರು ಇಲ್ಲಿನ 2-05 ಎಕರೆಯಲ್ಲಿ ಅಕ್ರಮ ಬಡಾವಣೆಗಳನ್ನು ನಿರ್ಮಿಸಿ 49 ಸೈಟುಗಳನ್ನಾಗಿ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು); | ಹೌದು<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರ ಸುತ್ತೋಲೆಗಳಾದ (1) ಸಂಖ್ಯೆ: ಉಆ(ಕಂ) ಪಿಆರ್-2221 / 2012-13 ದಿನಾಂಕ:31-01-2013 ರಲ್ಲಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನಧಿಕೃತ ಆಸ್ತಿಗಳ ನೋಂದಣಿ ನಿಯಂತ್ರಿಸುವ ಬಗ್ಗೆ," (2) ಸಂಖ್ಯೆ: ಉಆ(ಕಂ)ಪಿಆರ್-722/2009-10 ದಿನಾಂಕ:25-08-2009 ರಲ್ಲಿ ತೆರಿಗೆ ನಿರ್ಧರಿತ ಆಸ್ತಿಗಳು ಹಾಗೂ ನಿಯಮಾನುಸಾರ ತೆರಿಗೆ ನಿರ್ಧಾರಣೆಗೆ ಅರ್ಹವಲ್ಲದ (ಖಾತಾ ರಹಿತ) ಆಸ್ತಿಗಳಿಗೆ, ಆಸ್ತಿ ತೆರಿಗೆ (ಖಾತಾ) ವಹಿಗಳನ್ನು ನಿರ್ವಹಣೆ ಮಾಡುವ ಬಗ್ಗೆ ನಿರ್ದೇಶನ ನೀಡಿದ್ದು, ಎಲ್ಲಾ ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳಿಗೆ ನಿಯಮಾನುಸಾರ ಎಲ್ಲಾ ತೆರಿಗೆಗಳನ್ನು ಪಾವತಿಸಿಕೊಂಡು ಖಾತೆ ನೋಂದಾಯಿಸುವ ಕುರಿತು ಕ್ರಮವಹಿಸುವ ಅಧಿಕಾರ ಮತ್ತು ಖಾತೆ ನೋಂದಾಯಿತ ಎಲ್ಲಾ ದಾಖಲೆಗಳನ್ನು ಜೋಪಾನ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.<br><br>ಪ್ರಸ್ತಾಪಿತ ಸ್ವತ್ತನ್ನು ಸಂಬಂಧಪಟ್ಟ ಸ್ವತ್ತಿನ ಮಾಲೀಕತ್ವದ ಕುರಿತು ಬೆಂಗಳೂರು ಉತ್ತರ ನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ, ಬ್ಯಾಟರಾಯನಪುರ ಕಚೇರಿಯ ವಹಿಯಲ್ಲಿ ಸರ್ವೇ ನಂ.110/3, ಜಕ್ಕೂರು ಇಲ್ಲಿನ 2-05 ಎಕರೆ ಪ್ರದೇಶದಲ್ಲಿ ಅಕ್ರಮ ಬಡಾವಣೆಗಳನ್ನು ನಿರ್ಮಿಸಿ, 49 ಸೈಟುಗಳಾಗಿ ವಿಭಜಿಸಿ, ಈ ಸೈಟುಗಳಿಗೆ ಖಾತೆಗಳು ಅಕ್ರಮವಾಗಿ ದಾಖಲಿಸಿರುವುದು ಕಂಡು ಬಂದಿರುತ್ತದೆ. ಸಹಾಯಕ ಕಂದಾಯ ಅಧಿಕಾರಿ, ಬ್ಯಾಟರಾಯನಪುರ ಉಪವಿಭಾಗ ಇವರು ಈ ಖಾತೆಯನ್ನು ನೊಂದಾಯಿಸುವ ಅಥವಾ ತೆರಿಗೆಯನ್ನು ನಿಗಧಿಪಡಿಸುವ ಸಂದರ್ಭದಲ್ಲಿ ಮೇಲಾಧಿಕಾರಿಗಳಾದ ಕಂದಾಯ ಅಧಿಕಾರಿಗಳು, ಬ್ಯಾಟರಾಯನಪುರ ವಿಭಾಗ, ಉಪ ಆಯುಕ್ತರು ಮತ್ತು ಜಂಟಿ ಆಯುಕ್ತರು ರವರ ಅನುಮೋದನೆ ಪಡೆಯದೇ, ತಾವೇ ಸ್ವತಃ ಬಯೋಮೆಟ್ರಿಕ್ ಮೂಲಕ ಇವರ ಲಾಗಿನ್ ನಲ್ಲಿ ಸೃಜಿಸಿ ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳದೇ ತೆರಿಗೆಯನ್ನು ನಿಗಧಿಪಡಿಸಿ 'ಎ' ಖಾತಾವನ್ನು ನಿಯಮಬಾಹಿರವಾಗಿ ನೊಂದಾಯಿಸಿರುತ್ತಾರೆ. |
| ಆ) | ಸರ್ವೇ ನಂ 110/3, ಜಕ್ಕೂರು ಇಲ್ಲಿನ 2-05 ಎಕರೆಯಲ್ಲಿ ಅಕ್ರಮ ಸೈಟುಗಳನ್ನು ನಿರ್ಮಿಸುವಲ್ಲಿ ಅದೇ ವಿಭಾಗದ ಜಂಟಿ ಆಯುಕ್ತರೇ ನೇರ ಶಾಮೀಲಾಗಿದ್ದು, ಅವರ ಮೇಲೆ ಕೈಗೊಂಡ ಕ್ರಮದ ಬಗ್ಗೆ, ಹಾಗೂ ಅವರನ್ನು ಇದುವರೆಗೂ ಅಮಾನತ್ತುಗೊಳಿಸದಿರಲು ಕಾರಣದೊಂದಿಗೆ ವಿವರ ನೀಡುವುದು; | |

| | | |
|---|---|---|
| ಇ) | ಸರ್ವೇ ನಂ 110/3, ಜಕ್ಕೂರು ಇಲ್ಲಿನ 2-05 ಎಕರೆಯಲ್ಲಿ ಅಕ್ರಮ ಸೈಟುಗಳನ್ನು ನಿರ್ಮಿಸಿ ಸರಕಾರಕ್ಕೆ ಯಾವುದೇ ಶುಲ್ಕವನ್ನು ಸಂಗ್ರಹಿಸದೆ, ಅಕ್ರಮ ಹಾಗೂ ಕಾನೂನು ಬಾಹಿರವಾಗಿ "ಬಿ" ಖಾತೆಯ ಸೈಟುಗಳನ್ನು "ಎ" ಖಾತೆಯಾಗಿ ಬದಲಾಯಿಸಿ ಸರಕಾರಕ್ಕೆ ಕೋಟ್ಯಾಂತರ ರೂ.ಗಳ ಮೊತ್ತದ ನಷ್ಟ ಉಂಟು ಮಾಡುವಲ್ಲಿ ನೇರವಾಗಿ ಅಕ್ರಮದಲ್ಲಿ ಭಾಗಿಯಾದ ಜಂಟಿ ಆಯುಕ್ತರಿಂದಲೇ; ಸದರಿ ಮೊತ್ತವನ್ನು ವಸೂಲಿ ಮಾಡಿ ಸರಕಾರಕ್ಕೆ ಪಾವತಿಸಲು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು); | ವಾರ್ಡ್ ಸಂಖ್ಯೆ: 05 ಜಕ್ಕೂರು ವಾರ್ಡ್ ಸರ್ವೆ ನಂ. 110/3 ರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಅಭಿವೃದ್ಧಿ ಶುಲ್ಕ ವಂಚಿಸಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಕಂದಾಯ ನಷ್ಟ ಉಂಟು ಮಾಡಿ ಖಾತೆ ನೋಂದಾಯಿಸಿರುವ ಕುರಿತು ದೂರಿನ ಬಗ್ಗೆ ಉಪ ಆಯುಕ್ತರು, ವಲಯ-1 ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದು, ಈ ಮೇರೆಗೆ ಉಪ ಆಯುಕ್ತರು ರವರು ಪರಿಶೀಲನೆ ನಡೆಸಿ, ಸಹಾಯಕ ಕಂದಾಯ ಅಧಿಕಾರಿಗಳು, ಈ 49 ಖಾತೆಗಳನ್ನು ಸ್ವತಃ ತಾವೇ ನಿಯಮಬಾಹಿರವಾಗಿ 'ಎ' ಖಾತಾ ನೊಂದಾಯಿಸಿರುತ್ತಾರೆಂದು ವರದಿ ನೀಡಿರುತ್ತಾರೆ.<br><br>ಅದರಂತೆ, ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತರು ರವರ ಶಿಫಾರಸ್ಸಿನ ಮೇರೆಗೆ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರು ಆದೇಶ ಸಂಖ್ಯೆ:ಬಿ12(1)ಪಿ.ಆರ್/ಇ-213343/2026-27 ರಲ್ಲಿ ಶ್ರೀಮತಿ. ರೇಖಾ ಸಹಾಯಕ ಕಂದಾಯ ಅಧಿಕಾರಿ (ಬ್ಯಾಟರಾಯನಪುರ ಉಪವಿಭಾಗ) ರವರನ್ನು ಅಮಾನತು ಪಡಿಸಿ ದಿನಾಂಕ:22-04-2026 ರಂದು ಆದೇಶ ಹೊರಡಿಸಿರುತ್ತಾರೆ.<br><br>ಮುಂದುವರೆದಂತೆ, ಈ 49 ಖಾತೆಗಳನ್ನು ರದ್ದುಪಡಿಸುವ ಸಂಬಂಧ ಉಪ ಆಯುಕ್ತರು, ವಲಯ-1 ಮತ್ತು ವಿಚಾರಣಾಧಿಕಾರಿ ರವರ ವರದಿಯ ಮೇರೆಗೆ ಅಪರ ಆಯುಕ್ತರು(ಕಂದಾಯ) ಬೆಂಗಳೂರು ಉತ್ತರ ನಗರಪಾಲಿಕೆ ರವರು ಪರಿಶೀಲನೆ ನಡೆಸಿ, ಆದೇಶ ಸಂಖ್ಯೆ:ಅ.ಆ(ಕಂ)/ಬೆಂ.ಉ.ನ.ಪಾ/459/2026-27 ದಿನಾಂಕ:01-06-2026 ರಲ್ಲಿ "ಕಂದಾಯ ದಾಖಲೆ ಪುಸ್ತಕ 'ಎ' -70 ಸ್ಕ್ಯಾಂನಿಂಗ್ ಆಗಿರುವ ಆಸ್ತಿವಹಿಯಲ್ಲಿ ಪುಟದ ಸಂಖ್ಯೆ:12 ರಿಂದ 24 ಪುಟಗಳಲ್ಲಿ ಒಟ್ಟು 49 ಸ್ವತ್ತುಗಳು ಶ್ರೀ.ದಿಲೀಪ್ ಎಸ್ & ಶ್ರೀ.ಎಸ್.ಪ್ರದೀಪ್, ಶ್ರೀ.ಎಸ್.ಭೈರೇಗೌಡ, ಶ್ರೀ.ಎಸ್.ರಾಜು, ಶ್ರೀ.ಎ.ಶಶಿಕುಮಾರ್, ಶ್ರೀ.ರಾಜೇಶ್ ಎ, ರವರ ಹೆಸರಿನಲ್ಲಿ ನಿಯಮಬಾಹಿರವಾಗಿ ನೋಂದಾಯಿಸಿರುವ 49 ಸ್ವತ್ತುಗಳ ಎಲ್ಲಾ ಖಾತೆಗಳನ್ನು ರದ್ದುಪಡಿಸಿ ಆದೇಶಿಸಿರುತ್ತಾರೆ. ಮತ್ತು 'ಇ' ಆಸ್ತಿ ತಂತ್ರಾಂಶದಲ್ಲಿ ಸಹ ತೆಗೆಯಲಾಗಿರುತ್ತದೆ.<br><br>ಈ ಪ್ರಕರಣದಲ್ಲಿ ಜಂಟಿ ಆಯುಕ್ತರ ಪಾತ್ರ ಕಂಡುಬಂದಿರುವುದಿಲ್ಲ. |

**ಸಂಖ್ಯೆ:ನಅಇ 280 ಬಿಬಿಎಸ್ 2026**

**(ಕೃಷ್ಣ ಬೈರೇಗೌಡ)**
**ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು**